ಆಸಲಿನಲ್ಲಿ, ಅಲೇಕ್ಷ್ಯನಿಗೆ ನಮ್ಮನ್ನು – ಅಂದರೆ ನಾನು ಮತ್ತು ನನ್ನ ಗಂಡನನ್ನು, ಹೀಗೊಂದು ಔತಣ – ಸಂಜೆಗೆ ಕರೆಯುವ ಅಗತ್ಯವೇ ಇದ್ದಿಲ್ಲವೆಂದು, ನಮಗನಿಸಿದ್ದು, ಬೆಳ್ಳಂದೂರು ಕೆರೆಯನ್ನು ಎದುರುಗಾಣುತ್ತ – ಆಲ್ಮೋಸ್ಟ್ ಅದರೊಳಕ್ಕಿಳಿದು ಮುಳುಗೇಳುವ ಹಾಗೆ ಚಾಚಿಕೊಂಡಿರುವ ಅವನ ಲಿವಿಂಗ್‌ರೂಮು ಹೊಕ್ಕ ಮೇಲೆಯೇನೆ... ಮೈಸೂರರಮನೆಯ ದರ್ಬಾರ್ ಹಾಲಿಗೂ ಒಂದಳತೆ ದೊಡ್ಡದೆನಿಸುವ – ಆ ಐಷಾರಾಮೀ ಪಡಸಾಲೆಗಂಟಿದ ಮುಮ್ಮನೆಯಲ್ಲಿ ಮೆಟ್ಟು ಕಳಚುತ್ತಿರುವಾಗಲೇನೆ. 'ಚಿಕ್ಕ ಪಾರ್ಟಿ, ಸುಮೋದ್... ಬರೇ ಹತ್ತಿರದ ಗೆಳೆತನವುಳ್ಳವರಿಗೆ ಮಾತ್ರ...' ಅಂದಿದ್ದನಾದರೂ, ಮುಮ್ಮನೆಯಲ್ಲಿ ಗೋಡೆಬದಿಗೆ, ಸಾಲುದ್ದ ಜೋಡಿಸಿದ್ದ ಚಪ್ಪಲು–ಬೂಟುಗಳ ಸಂಖ್ಯೆಯನ್ನು ಕಂಡರಿಯುವಾಗ – ನಮ್ಮಿಬ್ಬರೆದೆಯೂ ಒಟ್ಟೇ ಧಸಕ್ಕೆಂದಿತ್ತು! 'ಮೋದ್... ವಾಪಸು ಹೊರಟು ಹೋಗೋಣವಾ?' – ಅಂತನ್ನುತ್ತ, ಮಧುಕರಿ ಒಮ್ಮೆಗೇ ಮೋರೆ ಕಿವಿಚಿ, ನನ್ನ ಕಿವಿಯ ಬಳಿ ಸಣ್ಣಂಸಣ್ಣಗೆ ಪಿಸುಗುಟ್ಟಿದ್ದು, ಬೂಟುಚಪ್ಪಲುಗಳನ್ನು ನೇರವಾಗಿ ಮತ್ತು ಒಪ್ಪವಾಗಿ ಜೋಡಿಸಿಡುತ್ತಿದ್ದ, ಅಲೇಕ್ಷ್ಯನ ಮನೆವಾರ್ತೆಯ ಹೆಣ್ಣಾಳಿನ ಕಿವಿಯಲ್ಲೂ ಮೊರೆದಿರಲೇಬೇಕು... ಈ ನನ್ನ ಗಂಡ – ಮಧುಕರಿಗೋ, ಹೇಳಿಕೇಳಿ, ದೊಡ್ಡನೆ ಧ್ವನಿ. ಹೈಹೈ ಡೆಸಿಬಲಿನ ಮೈಕುಗೊರಳು; ದನಿ ತಗ್ಗಿಸಿ ಎಷ್ಟೇ ಪಿಸುಪಿಸುವೆಂದರೂ, ಕಂಠದ ಬದಲು ಕಹಳೆಯಿಟ್ಟಿದ್ದಾನೆಂಬಂತೆ, ತಂತಾನೇ ವಾಲ್ಯೂಮು ಹೆಚ್ಚಿ ಎತ್ತರಿಸಿ ಬರುತ್ತದೆ!

ಕೂಡಲೆ ಕಣ್ಣಲ್ಲೇ ಗದರಿದೆ. ಬದಿಗೇ ಇದ್ದ ಆ ಹೆಣ್ಣಾಳು, ಮಧುಕರಿಯನ್ನೂ ನನ್ನನ್ನೂ ಏಕತ್ರ ನೋಡಿದ್ದಿರಬೇಕು, 'ನೀವಿಲ್ಲದೆ ಪಾರ್ಟಿಗೆ ಕಳೆ ಉಂಟಾ? ಸರ್ ನಿಮಗೇ ಕಾಯುತಾ ಇದ್ದರು ಮೇಡಂ...' ಅಂದಳು. ಅವಳ ಧ್ವನಿ ಕೇಳಿಸಿದ್ದೇ ಯಾರೆಂದು ಊಹೆಯಾಯಿತು. 'ಹೇ... ಜ್ಯಾಕಲಿನ್ ಅಲ್ಲವಾ?' ಎಂದು ಅಚ್ಚರಿ ತುಳುಕಿ ಆಡಿದೆ. ಅವಳನ್ನು ನಾನು ಯಾವೊತ್ತೂ ನೋಡಿದವಳಲ್ಲ. ಅಲೇಕ್ಷ್ಯನಿಗೆಂದು ಅವನ ಲ್ಯಾಂಡ್‌ಲೈನಿಗೆ ಕರೆದಾಗಲೆಲ್ಲ, ಫೋನೆತ್ತುವವಳು ಇವಳೇ! ಹಾಗಾಗಿ ಊಹಿಸಿದೆ. ಜ್ಯಾಕಲಿನ್ನಳೂ ನನ್ನಷ್ಟೇ ಬೆರಗಿನಲ್ಲಿ, 'ನೀವು ಸುಮೋದಿನಿ ಮೇಡಂ ಅಂತ ನಿಮ್ಮನ್ನು ನೋಡಿದ್ದೇ ಅಂದುಕೊಂಡೆ...' ಅಂತಂದಳು. 'ಸರ್ ಒಳಗಿದ್ದಾರೆ... ನೀವು ಬಂದಿಲ್ಲವಲ್ಲಾ ಅಂತ ಈಗಷ್ಟೇ ಬಂದು ನೋಡಿಕೊಂಡು ಹೋದರು... ಅದಕ್ಕೇ ಹೇಳಿದ್ದು, ನೀವಿಲ್ಲದೆ ಈ ಪಾರ್ಟಿ ನಡೆಯೋದು ಹೌದಾ?!' ನಕ್ಕಳು.




ಅಲೇಕ್ಷ್ಯ ನನ್ನ ಮಟ್ಟಿಗೆ ಬಲು ಹಿಂದಿನ ಪರಿಚಯ. ನನಗಿಂತ ಹತ್ತಾರು ವಯಸ್ಸು ಚಿಕ್ಕವನಾದರೂ, ಒಂದಾನೊಂದು ಕಾಲಕ್ಕೆ ಒಂದೇ ಆಫೀಸಿನಲ್ಲಿ ಏಳೆಂಟು ವರ್ಷ ಒಡನಿದ್ದೆವೆಂದು – ಒನ್ನಮೂನೆ ಸಲಿಗೆ. ಏಕವಚನದಲ್ಲಾಡುವ ವಾಡಿಕೆ. ಸಭ್ಯ ಸಂಭಾವಿತ ಹುಡುಗ. ಹುಟ್ಟಾ ಸಿರಿವಂತನಾದರೂ ಕೊಬ್ಬು ಮಾಡುವುದಿಲ್ಲ... ನಾನು ಕೆಲಸ ಬಿಟ್ಟು ರಿಟೈರಾಗಿ, ಅವನೂ ತನ್ನದೇ ಆಫೀಸು